ದಿನಾಂಕ : 20-02-2021 ಓ ಎಸ್ ನಂ. 240/2013

ಪಿ. ಡಬ್ಲ್ಯೂ - 2

<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಖ್ಯ ವಿಚಾರಣೆ : ಶ್ರೀ ಆರ್.ಎಸ್.ಕೆ ವಾದಿ ಪರ ವಕೀಲರಿಂದ</u>

ದಿನಾಂಕಃ 29-08-2020 ರಂದು ಆದ ಆದೇಶದಂತೆ ಪಿಡಬ್ಲೂ-2 ರವರ ವಿಚಾರಣೆಯನ್ನು ಪುನಃ ತೆಗೆದುಕೊಳ್ಳಲಾಯಿತು.

ಈ ದಿನ ನಾನು ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳ ಬಗ್ಗೆ ಮಾಹಿತಿ ಇರುತ್ತದೆ. ಸಾಕ್ಷಿ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿದ್ದು ಅದನ್ನು ನಾನು ಓದಿ ತಿಳಿದುಕೊಂಡ ನಂತರ ಅದಕ್ಕೆ ಸಹಿ ಮಾಡಿರುತ್ತೇನೆ. ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರು ಮಾಡುತ್ತಿದ್ದೇನೆ.

ಸಾಕ್ಷಿಯನ್ನು ಪಿಡಬ್ಲೂ-2 ಎಂದು ವಿಚಾರಣೆ ಮಾಡಲಾಯಿತು.

ಸಾಕ್ಷಿಯು ಸರ್ವೆ ನಂ. 15/3 ಈ+2 ಬ/2 ರ ಗಣಕೀಕೃತ ಪಹಣಿ ಪತ್ರಿಕೆಗಳನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-24 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು : ಶ್ರೀ ಸಿ.ಎಚ್.ಎಚ್ 1 ಮತ್ತು 3 ನೇ ಪ್ರತಿವಾದಿ ವಕೀಲರಿಂದಃ</u>

ನನ್ನ ಸಾಕ್ಷ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ. ದಾವೆಯು ಮೂರು ಆಸ್ತಿಯ ಸರ್ವೆ ನಂಬರಗಳಿಗೆ ಸಂಬಂಧಿಸಿದಂತೆ ಇದೆ. ಸರ್ವೆ ನಂ. 15 ಮತ್ತು 95/2 ಕ್ಕೆ ಖರೀದಿ ಪತ್ರ ಇದೆ ಎಂದು ನುಡಿಯುತ್ತಾರೆ. ಖರೀದಿಯ ಸಮಯದಲ್ಲಿ ನಾನು ಹಾಜರು ಇರಲಿಲ್ಲ. ಖರೀದಿ ಯಾವಾಗ ಆಯಿತು ಯಾರಾರು ಹಾಜರು ಇದ್ದರು ಎಷ್ಟು ಹಣಕ್ಕೆ ಆಯಿತು ಎಂದರೆ ನನಗೆ ಗೊತ್ತಿಲ್ಲ. ಖರೀದಿ ಪತ್ರಕ್ಕೆ ಯಾರು ಸಹಿ ಮಾಡಿದರು ಹಣವನ್ನು ಯಾರು ನೀಡಿದರು ಎಂದರೆ ನನಗೆ ಗೊತ್ತಿಲ್ಲ. ಖರೀದಿ ವಿಷಯದ ಬಗ್ಗೆ ನನಗೆ ಏನೂ ಗೊತ್ತಿಲ್ಲ ಎಂದರೆ ಸರಿ. ನಾನು ಹಾಜರು ಮಾಡಿದಂತಹ ನಿಪಿ-24 ಇದು ಯರಡಾಲ ಗ್ರಾಮಕ್ಕೆ ಸೇರಿದ್ದು ಎಂದರೆ ಸರಿ. ಸರ್ವೆ ನಂ. 95/2 ಇದು ನೇಗಿನಹಾಳ ಗ್ರಾಮಕ್ಕೆ ಸೇರಿದ್ದು ಎಂದರೆ ಸರಿ. ಸರ್ವೆ ನಂ. 95/2 ರ ಪಕ್ಕ ನನ್ನ ಆಸ್ತಿ ಇಲ್ಲ ಎಂದರೆ ಸರಿಯಲ್ಲ ಹಾಗೂ ನಾನು ವಾದಿಗೆ ಸಹಾಯ ಮಾಡಲೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ. 15 ಹಾಗೂ 95/2 ಕ್ಕೆ ಸಂಬಂಧಿಸಿದಂತೆ ಭೂ ನಕಾಶೆಯನ್ನು ಹಾಜರು ಮಾಡಿದ್ದೀರಿ ಎಂದರೆ ಸಾಕ್ಷಿಯು ಕೊಡು ಅಂತಾ ಅಂದರೆ ಕೊಡುತ್ತೇನೆ ಎಂದು ನುಡಿಯುತ್ತಾರೆ. ವಾದಿ ಸಹಾಯ ಮಾಡಲೆಂದು ಸುಳ್ಳು ಸಾಕ್ಷ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಶ್ರಿ ಕೆ.ಎಸ.ಕೆ 4 ನೇ ಪ್ರತಿವಾದಿ ಪರ ವಕೀಲರಿಂದಃ</u>

ನ್ಯಾಯಾಲಯಕ್ಕೆ ನಾನೇ ಸ್ವತಃ ಬಂದಿರುತ್ತೇನೆ. ಸಾಕ್ಷಿ ಹೇಳಲಿಕ್ಕೆ ನನಗೆ ಮಾಹಿತಿ ನೀಡಿಲ್ಲ ನಾನೇ ಬಂದಿದ್ದೇನೆ. ನ್ಯಾಯಾಲಯದಲ್ಲಿ ದಾವೆ ಇದೆ ಎನ್ನುವುದು ಹೇಗೆ ಗೊತ್ತಾಯಿತು ಎಂದರೆ ಸಾಕ್ಷಿಯು ನಾನು ಹಾಗೂ ವಾದಿಯು ಹೊಲದಲ್ಲಿ ಮಾಡನಾಡುವಾಗ ತಿಳಿದು ಬಂತು ಎಂದು ಹೇಳುತ್ತಾರೆ. ಈ ದಾವೆಯನ್ನು ಸದೆಪ್ಪ ಇತನು ಉಳಪ್ಪನ ವಿರುದ್ಧ ದಾಖಲು ಮಾಡರುತ್ತಾನೆ. ನನಗೆ ಈ ದಾವೆಯಲ್ಲಿ ಎಷ್ಟು ಪಕ್ಷಗಾರರು ಇರುತ್ತಾರೆ ಎಂಬ ಮಾಹಿತಿ ಇಲ್ಲ ಆದರೆ ಸಾಕ್ಷಿಯು ಮುಂದುವರೆದು ರುದ್ರಪ್ಪ ಮತ್ತು ಆತನ ತಂಗಿ ಇರುತ್ತಾರೆ ಎಂದು ನುಡಿಯುತ್ತಾರೆ. ನಾನು ಹೇಳಿದಷ್ಟು ಜನ ಪಕ್ಷಗಾರರು ಇರುತ್ತಾರೆ ಎಂದರೆ ಸರಿ. ವಾದಿಗೆ ಸಂಬಂಧಿಸಿದ ಆಸ್ತಿ ಹಕ್ಕು ಪತ್ರಗಳನ್ನು ಹಾಗೂ ಪಹಣಿಗಳನ್ನು ನೋಡಿಲ್ಲ. 2017 ನೇ ಸಾಲಿನಲ್ಲಿ ಸರ್ವೆ ನಂ. 95/2 ರ ಪಹಣಿ ಪತ್ರಿಕೆಯಲ್ಲಿ ಶಿವಪ್ಪನ ಹೆಸರು ಇರಬಹುದು ಎಂದು ನುಡಿಯುತ್ತಾರೆ. 2017 ನೇ ಇಸವಿಯಲ್ಲಿ ರುದ್ರಪ್ಪ ತಂದೆ ಶಿವಪ್ಪ ಸುಣದಕುಂಪಿ ಯವರ ಹೆಸರಿತ್ತು ಎಂದರೆ ಸರಿ. ಸದರಿ ರುದ್ರಪ್ಪನ ತಂದೆ ಶಿವಪ್ಪ ಸುಣದಕುಂಪಿ ಯವರು ಸರ್ವೆ ನಂ. 95/2 ಕ್ಕೆ ಮಾಲೀಕನಿರುತ್ತಾನೆ ಎಂದರೆ ಸರಿ. ಸರ್ವೆ ನಂ. 95/2 ಕ್ಕೆ ಈಗಿನ ಉತಾರದಲ್ಲಿ ಯಾರ ಹೆಸರು ಇದೆ ಎಂಬುದನ್ನು ನಾನು ನೋಡಿಲ್ಲ. ದಿನಾಂಕಃ 06-01-2017 ನೇ ಇಸವಿಯಲ್ಲಿ ಪ್ರತಿವಾದಿ 4 ಇತನು ಸರ್ವೆ ನಂ. 95/2 ನ್ನು 8,40,000/- ರೂ ಗಳಿಗೆ ಖರೀದಿ ಮಾಡಿದ್ದಾನೆ ಎಂದರೆ ಸಾಕ್ಷಿಯು ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಖರೀದಿ ಕಾಗದ ಪತ್ರವು ನೊಂದಾವಣೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕಾಗದ ಪತ್ರದ ಅನ್ವಯ 4 ನೇ ಪ್ರತಿವಾದಿಯು ಮಾಲೀಕನಿರುತ್ತಾನೆ ಹಾಗೂ ಆತನ ಹೆಸರಿನಲ್ಲಿ ಪಹಣಿ ಪತ್ರಿಕೆ ಬರುತ್ತವೆ ಎಂದರೆ ಸಾಕ್ಷಿಯು ಖೊಟ್ಟಿ ಖರೀದಿಯಾಗಿರುತ್ತದೆ ಎಂದು ನುಡಿಯುತ್ತಾರೆ. ಖರೀದಿ ಕಾಗದ ಪತ್ರವು ಯಾವ ಆಧಾರದ ಮೇಲೆ ಖೊಟ್ಟಿಯಾಗಿದೆ ಎಂದು ಹೇಳುತ್ತಿದ್ದೀರಿ ಎಂದರೆ ಸಾಕ್ಷಿಯು ನನಗೆ ವಾದಿಯು ತಿಳಿಸಿರುತ್ತಾನೆ ಎಂದು ನುಡಿಯುತ್ತಾರೆ. ಸರ್ವೆ ನಂ. 95/2 ಕ್ಕೆ 4 ನೇ ಪ್ರತಿವಾದಿಯು ಮಾಲೀಕ ಹಾಗೂ ಸ್ವಾಧೀನದಾರ ಇರುತ್ತಾನೆ ಎಂದರೆ ಸರಿಯಲ್ಲ. ನನಗೆ ದಾವಾ ಆಸ್ತಿಗೆ ಸಂಬಂದಿಸಿದಂತೆ ಯಾವ ಮಾಹಿತಿ ಇಲ್ಲದಿದ್ದರೂ ಸಹ ವಾದಿಗೆ ಸಹಾಯ ಮಾಡಲೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

**ಹೆ ಪ್ರ ದ ನ್ಯಾ ದಂ ನ್ಯಾ ಬೈಲಹೊಂಗಲ**